# ವಿದೇಶೀಯರ ನೋಂದಣಿ ಅಧಿನಿಯಮ, 1939

**(1939ರ ಅಧಿನಿಯಮ ಸಂಖ್ಯೆ 16)**

**[15ನೇ ಮಾರ್ಚ್ 1999ರ ಭಾರತ ರಾಜಪತ್ರದ IX ನೇ ಭಾಗದ 1ನೇ ವಿಭಾಗದ 17ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 4 ಮತ್ತು 5ನೇ ಪುಟಗಳಲ್ಲಿ ಪ್ರಕಟಿತ]**

**ಪ್ರಕರಣಗಳ ಅನುಕ್ರಮಣಿಕೆ**

ಪ್ರಕರಣಗಳು

1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.
2. ಪರಿಭಾಷೆಗಳು.
3. ನಿಯಮ ರಚನಾಧಿಕಾರ.
4. ರುಜುವಾತಿನ ಭಾರ.
5. ದಂಡನೆಗಳು.
6. ಅಧಿನಿಯಮದ ಅನ್ವಯದಿಂದ ವಿನಾಯಿತಿಗೊಳಿಸಲು ಅಧಿಕಾರ.
7. ಈ ಅಧಿನಿಯಮದ ಮೇರೆಗೆ ಕಾರ್ಯ ನಿರ್ವಹಿಸುವ ವ್ಯಕ್ತಿಗಳಿಗೆ ಸಂರಕ್ಷಣೆ.
8. ಇತರ ಕಾನೂನುಗಳ ಅನ್ವಯವು ಪ್ರತಿಷೇಧಿತವಾಗಿಲ್ಲ.
9. ಭಾಗ-ಬಿ ರಾಜ್ಯಗಳಿಗೆ ಅಧಿನಿಯಮದ ಅನ್ವಯ.

# ವಿದೇಶೀಯರ ನೋಂದಣಿ ಅಧಿನಿಯಮ, 1939

**(1939ರ ಅಧಿನಿಯಮ ಸಂಖ್ಯೆ 16)**

[8ನೇ ಏಪ್ರಿಲ್ 1939]

ಭಾರತದಲ್ಲಿನ ವಿದೇಶೀಯರ ನೋಂದಣಿಗಾಗಿ ಉಪಬಂಧಿಸುವ ಅಧಿನಿಯಮ.

ಭಾರತಕ್ಕೆ ಪ್ರವೇಶಿಸುವ, ಅಲ್ಲಿ ಇರುವ ಮತ್ತು ಅಲ್ಲಿಂದ ಹೊರಡುವ ವಿದೇಶೀಯರ ನೋಂದಣಿಗಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದು :-

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.**- (1) ಈ ಅಧಿನಿಯಮವನ್ನು ವಿದೇಶೀಯರ ನೋಂದಣಿ ಅಧಿನಿಯಮ, 1939 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, -

(ಎ) "ವಿದೇಶೀಯ" ಎಂದರೆ, ಭಾರತದ ನಾಗರಿಕನಲ್ಲದ ವ್ಯಕ್ತಿ;

(ಬಿ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು.

**3. ನಿಯಮ ರಚನಾಧಿಕಾರ.**- (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ತರುವಾಯ ವಿದೇಶೀಯರಿಗೆ ಸಂಬಂಧಿಸಿದಂತೆ ಈ ಕೆಳಕಂಡ ಯಾವುದೇ ಅಥವಾ ಎಲ್ಲಾ ಉದ್ದೇಶಗಳಿಗಾಗಿ, ಎಂದರೆ,-

(ಎ) ಭಾರತಕ್ಕೆ ಪ್ರವೇಶಿಸುವ ಅಥವಾ ಅಲ್ಲಿ ಇರುವ ಯಾವನೇ ವಿದೇಶೀಯನನ್ನು, ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ನಿಯಮಿಸಬಹುದಾದಂಥ ವಿವರಗಳೊಂದಿಗೆ ನಿಯಮಿಸಿದ ಪ್ರಾಧಿಕಾರಿಗೆ, ತನ್ನ ಇರುವಿಕೆಯ ಬಗ್ಗೆ ವರದಿ ಮಾಡಿಕೊಳ್ಳಲು ಅಗತ್ಯಪಡಿಸುವುದಕ್ಕಾಗಿ;

(ಬಿ) ಭಾರತದಲ್ಲಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಂಚರಿಸುತ್ತಿರುವ ಯಾವನೇ ವಿದೇಶೀಯನನ್ನು ಅಂಥ ಇತರ ಸ್ಥಳದಲ್ಲಿ ಆಗಮಿಸಿದ ಮೇಲೆ ತನ್ನ ಇರುವಿಕೆಯನ್ನು ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ನಿಯಮಿಸಬಹುದಾದಂಥ ವಿವರಗಳೊಂದಿಗೆ ನಿಯಮಿಸಿದ ಪ್ರಾಧಿಕಾರಿಗೆ ವರದಿ ಮಾಡಿಕೊಳ್ಳಲು ಅಗತ್ಯಪಡಿಸುವುದಕ್ಕಾಗಿ;

(ಸಿ) ಭಾರತವನ್ನು ಬಿಡುವುದರಲ್ಲಿರುವ ಯಾವನೇ ವಿದೇಶೀಯನನ್ನು, ಹೊರಡುವುದಕ್ಕೆ ಮುಂಚೆ ಹೊರಡುವ ತನ್ನ ಉದ್ದೇಶಿತ ದಿನಾಂಕ ಮತ್ತು ನಿಯಮಿಸಬಹುದಾದಂಥ ಇತರ ವಿವರಗಳನ್ನು ಮತ್ತು ನಿಯಮಿಸಬಹುದಾದಂಥ ಅವಧಿಯೊಳಗೆ ಅಂಥ ಪ್ರಾಧಿಕಾರಿಗೆ ವರದಿ ಮಾಡಲು ಅಗತ್ಯಪಡಿಸುವುದಕ್ಕಾಗಿ;

(ಡಿ) ಭಾರತಕ್ಕೆ ಪ್ರವೇಶಿಸುವ, ಅಲ್ಲಿ ಇರುವ ಮತ್ತು ಅಲ್ಲಿಂದ ಹೊರಡುವ ಯಾವನೇ ವಿದೇಶೀಯನನ್ನು ನಿಯಮಿಸಲಾದ ಪ್ರಾಧಿಕಾರಿಯು ತಗಾದೆ ಮಾಡಿದ ಮೇಲೆ ಅವನ ಗುರುತಿನ ಬಗ್ಗೆ ನಿಯಮಿಸಬಹುದಾದಂಥ ರುಜುವಾತನ್ನು ಹಾಜರುಪಡಿಸಲು ಅಗತ್ಯ ಪಡಿಸುವುದಕ್ಕಾಗಿ;

(ಇ) ಹೊಟೇಲು, ಭೋಜನಗೃಹ, ಸರಾಯಿ ಅಥವಾ ಅಂಥದೇ ಸ್ವರೂಪದ ಯಾವುದೇ ಇತರ ಆವರಣದ ವ್ಯವಸ್ಥಾಪನೆಯನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ನಿಯಮಿಸಬಹುದಾದಂಥ ವಿವರಗಳೊಂದಿಗೆ ಯಾವುದೇ ಅವಧಿಯವರೆಗೆ ಅಲ್ಲಿ ವಾಸಿಸುತ್ತಿರುವ ಯಾವನೇ ವಿದೇಶೀಯನ ಹೆಸರನ್ನು ನಿಯಮಿಸಿದ ಪ್ರಾಧಿಕಾರಿಗೆ ವರದಿ ಮಾಡಲು ಅಗತ್ಯಪಡಿಸುವುದಕ್ಕಾಗಿ;

(ಎಫ್) ಯಾವುದೇ ನೌಕೆ ಅಥವಾ ವಿಮಾನದ ವ್ಯವಸ್ಥಾಪನೆಯನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ಯಾವನೇ ವ್ಯಕ್ತಿಯನ್ನು ಅಂಥ ನೌಕೆ ಅಥವಾ ವಿಮಾನದಲ್ಲಿ ಭಾರತಕ್ಕೆ ಪ್ರವೇಶಿಸುವ ಅಥವಾ ಅಲ್ಲಿಂದ ಹೊರಡಲು ಉದ್ದೇಶಿಸಿರುವ ಯಾವನೇ ವಿದೇಶೀಯನ ಬಗ್ಗೆ ನಿಯಮಿಸಬಹುದಾದಂಥ ಮಾಹಿತಿಯನ್ನು ನಿಯಮಿಸಿದ ಪ್ರಾಧಿಕಾರಿಗೆ ಒದಗಿಸಲು ಮತ್ತು ಈ ಅಧಿನಿಯಮವನ್ನು ಜಾರಿಗೊಳಿಸುವುದಕ್ಕಾಗಿ ಅವಶ್ಯವಾಗಬಹುದಾದಂಥ ಅಥವಾ ನಿಯಮಿಸಬಹುದಾದಂಥ ಸಹಾಯವನ್ನು ಅಂಥ ಪ್ರಾಧಿಕಾರಿಗೆ ಒದಗಿಸಲು ಅಗತ್ಯಪಡಿಸುವುದಕ್ಕಾಗಿ;

(ಜಿ) ಈ ಅಧಿನಿಯಮವನ್ನು ಜಾರಿಗೊಳಿಸುವುದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಅವಶ್ಯ ಅಥವಾ ವಿಹಿತವೆಂದು ಕಂಡುಬರುವಂಥ ಇತರ ಪ್ರಾಸಂಗಿಕ ಅಥವಾ ಪೂರಕ ವಿಷಯಗಳನ್ನು ಉಪಬಂಧಿಸುವುದಕ್ಕಾಗಿ

-ನಿಯಮಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಮೂವತ್ತು ದಿವಸಗಳ ಒಟ್ಟು ಅವಧಿಯವರೆಗೆ ಇಡತಕ್ಕುದು

ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದು ಅಥವಾ ಪರಿಣಾಮಕಾರಿಯಾಗಿರತಕ್ಕುದಲ್ಲ; ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕುದಲ್ಲ.

**4. ರುಜುವಾತಿನ ಭಾರ.–** ಈ ಅಧಿನಿಯಮಕ್ಕೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಕ್ಕೆ ಸಂಬಂಧಿಸಿದಂತೆ ಯಾವನೇ ವ್ಯಕ್ತಿಯು ವಿದೇಶೀಯನೇ ಅಥವಾ ಅಲ್ಲವೇ ಅಥವಾ ವಿಶಿಷ್ಟ ವರ್ಗದ ಅಥವಾ ವಿವರಣೆಯ ವಿದೇಶೀಯನೇ ಅಥವಾ ಅಲ್ಲವೆ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಸಂದರ್ಭಾನುಸಾರ ಅಂಥ ವ್ಯಕ್ತಿಯು ತಾನು ವಿದೇಶೀಯನಲ್ಲ ಅಥವಾ ಅಂಥ ವಿಶಿಷ್ಟ ವರ್ಗದ ಅಥವಾ ವಿವರಣೆಯ ವಿದೇಶಿಯನಲ್ಲ ಎಂಬುದನ್ನು ರುಜುವಾತುಪಡಿಸುವ ಹೊಣೆಯು, ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರಲ್ಲಿ ಏನೇ ಅಡಕವಾಗಿದ್ದಾಗ್ಯೂ, ಅಂಥ ವ್ಯಕ್ತಿಯ ಮೇಲಿರತಕ್ಕುದು.

**5. ದಂಡನೆಗಳು.–** ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುದೇ ನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಅಥವಾ ಉಲ್ಲಂಘಿಸಲು ಪ್ರಯತ್ನಿಸುವ ಅಥವಾ ಅವುಗಳನ್ನು ಪಾಲಿಸಲು ತಪ್ಪುವ ಯಾವನೇ ವ್ಯಕ್ತಿಯು, ಅವನು ವಿದೇಶೀಯನಾಗಿದ್ದರೆ, ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಅಥವಾ ಅವನು ವಿದೇಶೀಯನಾಗಿರದಿದ್ದರೆ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕುದು.

**6. ಅಧಿನಿಯಮದ ಅನ್ವಯದಿಂದ ವಿನಾಯಿತಿಗೊಳಿಸಲು ಅಧಿಕಾರ.–** ಕೇಂದ್ರ ಸರ್ಕಾರವು ಆದೇಶದ ಮೂಲಕ ಯಾವನೇ ಒಬ್ಬ ವಿದೇಶೀಯ ಅಥವಾ ಯಾವುದೇ ವರ್ಗದ ಅಥವಾ ವಿವರಣೆಯ ವಿದೇಶೀಯನಿಗೆ ಸಂಬಂಧಪಟ್ಟಂತೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಯಾವುವೇ ಅಥವಾ ಯಾವುದೇ ಉಪಬಂಧವು ಅನ್ವಯವಾಗತಕ್ಕುದಲ್ಲವೆಂದು ಅಥವಾ ಸದರಿ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಮಾರ್ಪಾಟುಗಳು ಅಥವಾ ಅಂಥ ಷರತ್ತುಗಳಿಗೊಳಪಟ್ಟು ಮಾತ್ರ ಅನ್ವಯವಾಗತಕ್ಕುದೆಂದು ಘೋಷಿಸಬಹುದು:

ಪರಂತು, ಅಂಥ ಪ್ರತಿಯೊಂದು ಆದೇಶದ ಪ್ರತಿಯನ್ನು, ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗ ಸಂಸತ್ತಿನ ಮುಂದೆ ಇಡತಕ್ಕುದು.

**7. ಈ ಅಧಿನಿಯಮದ ಮೇರೆಗೆ ಕಾರ್ಯನಿರ್ವಹಿಸುವ ವ್ಯಕ್ತಿಗಳಿಗೆ ಸಂರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

**8. ಇತರ ಕಾನೂನುಗಳ ಅನ್ವಯವು ಪ್ರತಿಷೇಧಿತವಾಗಿಲ್ಲ.–** ಈ ಅಧಿನಿಯಮದ ಉಪಬಂಧಗಳು, ವಿದೇಶೀಯರ ಅಧಿನಿಯಮ, 1946 (1946ರ 31) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳ ಜೊತೆಗೆ ಹೆಚ್ಚಿಗೆಯಾಗಿರತಕ್ಕುದು ಆದರೆ ಅವುಗಳನ್ನು ಅಲ್ಪೀಕರಿಸದೆ ಇರತಕ್ಕುದು.

**9. ಭಾಗ–ಬಿ ರಾಜ್ಯಗಳಿಗೆ ಅಧಿನಿಯಮದ ಅನ್ವಯ.–** ಭಾಗ–ಬಿ ರಾಜ್ಯಗಳ (ಕಾನೂನುಗಳ) ಅಧಿನಿಯಮ, 1951ರ (1951ರ3) 3ನೇ ಪ್ರಕರಣ ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

*   *   *